Date :25.11.2025

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ B.N.T. ವಕೀಲರಿಂದ –**

ನನ್ನ ಸಾಕ್ಷಿಗೆ ಬೆಂಬಲಿತವಾಗಿ, 1 ನೇ ಎದುರುದಾರರು ದಿಃ 21.06.2021 ರ ದಿನಾಂಕದ ಅವಾರ್ಡ ನೋಟೀಸ್ ನನಗೆ ಕಳುಹಿಸಿದ್ದು, ಅದರ ದೃಢೀಕೃತ ಪ್ರತಿ ಮತ್ತು ಅರ್ಜಿಯಲ್ಲಿ ಕಾಣಿಸಿದ ಆಸ್ತಿಯ ಬಗ್ಗೆ ಇರುವ 2 ಪಹಣಿ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–44 ರಿಂದ 46 ಎಂದು, 1 ನೇ ಎದುರುದಾರರು ಭೂಸ್ವಾಧೀನ ಪಡಿಸಿಕೊಂಡ ನನ್ನ ಮಾಲೀಕತ್ವದ ಜಮೀನಿನಲ್ಲಿ ನೀರು ಸಂಗ್ರಹಣಾ ತೊಟ್ಟಿಯನ್ನು ಸೈಜುಗಲ್ಲಿನಿಂದ ನಿರ್ಮಿಸಿದ್ದು, ಅದಕ್ಕೆ ವೆಚ್ಚ ಮಾಡಿದ ಬಗ್ಗೆ ತೋರಿಸಲು ಇರುವ ಅಂದಾಜು ಪಟ್ಟಿ ಮತ್ತು ನಕಾಶೆಯೊಂದಿಗೆ ಹಾಜರುಪಡಿಸಿದ್ದು, ಅದನ್ನು ನಿಪಿ–47 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿಯಲ್ಲಿ ಕೋರಿದಂತೆ ಎದುರುದಾರರ ವಿರುದ್ಧ ಆದೇಶ ಮಾಡಲು ಕೋರುತ್ತೇನೆ.

**– ಪಾಟೀ ಸವಾಲು – ಎದುರುದಾರ 1 ಮತ್ತು 2 ರವರ ಪರ ಶ್ರೀಜಿ.ಎಸ್.ಎ. ಮತ್ತು ಡಿ.ಜಿ.ಪಿ. ವಕೀಲರಿಂದ –**

**(ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ನ್ಯಾಯಯುತ ದೃಷ್ಟಿಯಿಂದ ಕಾಲಾವಕಾಶ ನೀಡಿ ಪಾಟೀ ಸವಾಲು ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.